# ವರದಿ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ ಕೃಷಿಮೇಳವು ದಿನಾಂಕ 13 ರಿಂದ 18 ಜನವರಿ 2018ರ ವರೆಗೆ ಶ್ರೀಕ್ಷೇತ್ರ ಸುತ್ತೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಕೃಷಿಮೇಳದ ಅಂಗವಾಗಿ ಜೆಎಸ್‌ಎಸ್ ಶಾಲಾ ಆವರಣದಲ್ಲಿ 3 ಎಕರೆ ಪ್ರದೇಶದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆಗಳು, ಒಂದು ಎಕರೆಯಲ್ಲಿ ಕೃಷಿ ಬ್ರಹ್ಮಾಂಡ ಮತ್ತು ಕೃಷಿ ವಸ್ತುಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ದೇಸಿ ಹಸು, ಕುರಿ, ಮೇಕೆ, ಮೊಲ ಹಾಗೂ ಅಲಂಕಾರಿಕ ಮೀನುಗಳ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿತ್ತು. ದಿನಾಂಕ 13.01.2018 ರಂದು ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರಡ್ಡಿ, ಮಠಾಧೀಶರುಗಳು, ವಿಜ್ಞಾನಿಗಳು ಹಾಗೂ ಗಣ್ಯರುಗಳ ಉಪಸ್ಥಿತಿಯಲ್ಲಿ ಕೃಷಿಮೇಳಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಸಣ್ಣ, ಅತಿ ಸಣ್ಣ ರೈತರು ಜಲಾನಯನ ತತ್ವಗಳು ಮತ್ತು ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸಿ ಸ್ವಾವಲಂಬಿ ಬದುಕಿಗಾಗಿ ಹೆಚ್ಚು ಖರ್ಚಿಲ್ಲದೆ ನಿರ್ಮಿಸಬಹುದಾದ ಸಮಗ್ರ ಕೃಷಿ ಮಾದರಿ – ಒಂದು ಎಕರೆಯಲ್ಲಿ **'ಕೃಷಿ ಬ್ರಹ್ಮಾಂಡ'ವು–** ಪ್ರತಿವರ್ಷದಂತೆ ಈ ಸಾಲಿನಲ್ಲೂ ವಿಶೇಷವಾಗಿ ಗಮನ ಸೆಳೆಯಿತು. ಈ ಪ್ರಾತ್ಯಕ್ಷಿಕೆಯಲ್ಲಿ 120 ವಿವಿಧ ಬೆಳೆಗಳನ್ನು ಕಾಣಬಹುದಾಗಿತ್ತು. ಇದಲ್ಲದೆ, 80 ವಿವಿಧ ಹೂವು–ಹಣ್ಣು–ತರಕಾರಿ ಬೆಳೆಗಳನ್ನೊಳಗೊಂಡ ತೋಟಗಾರಿಕೆ ಬೆಳೆ ಪ್ರಾತ್ಯಕ್ಷಿಕೆಗಳು, ರಾಗಿ ಬೆಳೆಯ 42 ದೇಸಿ ತಳಿಗಳು ಮತ್ತು 11 ಮೇವಿನ ಬೆಳೆಗಳು ವೀಕ್ಷಕರ ಗಮನಸೆಳೆದವು. ಪಶು ಸಂಗೋಪನೆ ಪ್ರದರ್ಶನದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ರೈತರು ತಮ್ಮಲ್ಲಿರುವ ವಿಶಿಷ್ಟ ತಳಿಗಳನ್ನು ಪ್ರದರ್ಶಿಸಿದರು. ಹಸುವಿನ ತಳಿಗಳಾದ ದೇವಣಿ, ಓಂಗೋಲ್, ಸಾಹಿವಾಲ್, ಗಿರ್, ಮಲ್ನಾಡ್ ಗಿಡ್ಡ ಹಾಗೂ ಹಳ್ಳಿಕಾರ್ ತಳಿಗಳು, ಮುರ್ರಾ ಎಮ್ಮೆಗಳು ಹಾಗೂ ಜಮ್ನಾಪಾರಿ ಮೇಕೆ ಹಾಗೂ ಬಂಡೂರು ಕುರಿ ತಳಿಗಳು, ಮೊಲಗಳು, ಕೃಷಿ ಹೊಂಡದಲ್ಲಿ ಅಲಂಕಾರಿಕ ಮೀನು ಮುಂತಾದವು ಲಕ್ಷಾಂತರ ರೈತರನ್ನು ಹಾಗೂ ಭಕ್ತಾದಿಗಳನ್ನು ಆಕರ್ಷಿಸಿದವು.

ಕೃಷಿಮೇಳದಲ್ಲಿ ಭಾಗವಹಿಸಿದ ಅನೇಕ ರೈತರು ಬಿತ್ತನೆ ಬೀಜಗಳು, ತಳಿಗಳು ಹಾಗೂ ಸಸ್ಯ ಸಂರಕ್ಷಣೆ ಕುರಿತು ಕೃಷಿ ವಿಜ್ಞಾನ ಕೇಂದ್ರದ ತಜ್ಞರಿಂದ ಮಾಹಿತಿ–ಮಾರ್ಗದರ್ಶನ ಪಡೆದರು. ಸಮೃದ್ಧವಾಗಿ ಬೆಳೆದ ಹೂವುಗಳನ್ನು ನೋಡಿ ಅವುಗಳ ಬಿತ್ತನೆ ಬೀಜಗಳನ್ನು ಕೇಳುವುದು ಪ್ರತಿ ಸಲದಂತೆ ಈ ವರ್ಷವೂ ಸಾಮಾನ್ಯವಾಗಿತ್ತು.

ಪ್ರತಿಸಲದಂತೆ ಈ ವರ್ಷವೂ ಸಿರಿಧಾನ್ಯಗಳಾದ ಸಾಮೆ, ನವಣೆ, ಹಾರಕ, ಊದಲು, ಬರಗು, ಕೊರಲೆ ಮುಂತಾದವನ್ನು ಬೆಳೆಯುವುದರೊಂದಿಗೆ ಈ ವರ್ಷ ಕೃಷಿ ವಸ್ತುಪ್ರದರ್ಶನದಲ್ಲಿ 20 ಮಳಿಗೆಗಳಲ್ಲಿ ಸಿರಿಧಾನ್ಯಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ, ದಿನಾಂಕ 16.01.2018 ರಂದು ಸಿರಿಧಾನ್ಯ ಅಡುಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಒಟ್ಟು 17 ಮಹಿಳೆಯರು ಭಾಗವಹಿಸಿ ವಿವಿಧ ಸಿರಿಧಾನ್ಯದ ಪಾಕಗಳನ್ನು ಪ್ರಸ್ತುತಪಡಿಸಿದರು.

ಕೃಷಿ ವಸ್ತುಪ್ರದರ್ಶನದಲ್ಲಿ ಒಟ್ಟು 140 ಮಳಿಗೆಗಳಲ್ಲಿ 125 ವಿವಿಧ ಸಂಘ ಸಂಸ್ಥೆಗಳು ಬಿತ್ತನೆ ಬೀಜಗಳು, ಬೆಳೆಗಳು, ತಳಿಗಳು, ರಸಗೊಬ್ಬರಗಳು, ಸಸ್ಯಸಂರಕ್ಷಣೆ ರಾಸಾಯನಿಕಗಳು, ಸಾವಯವ ಗೊಬ್ಬರಗಳು, ಉತ್ಪನ್ನಗಳು ಹಾಗೂ ಮಾರುಕಟ್ಟೆ ಕುರಿತ ಮಾಹಿತಿ ಒದಗಿಸಿದವು. ಕೃಷಿ ವಿಶ್ವವಿದ್ಯಾಲಯ, ಕೃಷಿ, ತೋಟಗಾರಿಕೆ, ರೇಷ್ಮೆ, ಹಾಗೂ ಪಶುಪಾಲನೆ ಇಲಾಖೆಗಳು, ಜಿಲ್ಲಾ ಪಂಚಾಯತ್, ಖಾಸಗಿ ಸಂಸ್ಥೆಗಳು, ಸ್ವಸಹಾಯ ಸಂಘಗಳು ಕೃಷಿ ವಸ್ತುಪ್ರದರ್ಶನದಲ್ಲಿ ಭಾಗವಹಿಸಿದ್ದರು.

ದಿನಾಂಕ 16.01.2018ರ ಮಂಗಳವಾರದಂದು ಏರ್ಪಡಿಸಲಾದ 'ರೈತ ಉತ್ಪಾದನಾ ಕಂಪನಿಗಳು–ಅವಕಾಶಗಳು ಮತ್ತು ಸವಾಲುಗಳು' ವಿಚಾರಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾರಿಷಸ್ ಗಣರಾಜ್ಯದ ಉಪರಾಷ್ಟ್ರಪತಿಗಳಾದ ಘನೆತವೆತ್ತ ಪರಮಶಿವಂ ಪಿಳ್ಳೈ ವ್ಯಾಪೂರಿರವರು ಮಾತನಾಡಿ ಸ್ವತಃ ಕೃಷಿ ಪದವೀಧರನಾಗಿರುವ ನನಗೆ ಕೃಷಿಮೇಳದಲ್ಲಿ ಪ್ರಸ್ತುತಪಡಿಸಲಾದ  ಅಗಾಧ ಬೆಳೆ ವೈವಿದ್ಯವು ಅತ್ಯಂತ ಅಶ್ಚರ್ಯ ಹಾಗೂ ಹರ್ಷವನ್ನುಂಟುಮಾಡಿದೆ ಎಂದು ಪರಪಪೂಜ್ಯ ಜಗದ್ಗುರುಗಳು ಮತ್ತು ಸಮಸ್ತ ಆಯೋಜಕರಿಗೆ ಅಭಿನಂದನೆ ಸಲ್ಲಿಸುತ್ತಾ ಇಂತಹ ಅದ್ಭುತ ಜಾತ್ರಾಮಹೋತ್ಸವಕ್ಕೆ ತಮ್ಮನ್ನು ಆಹ್ವಾನಿಸಿದ್ದಾಕ್ಕಾಗಿ ಶ್ರೀಮಠಕ್ಕೆ ಕೃತಜ್ಞತೆಗಳನ್ನು ತಿಳಿಸಿ, ಮುಂದಿನ ಜಾತ್ರೆಗೆ ಮಾರಿಷಸ್ ಸರ್ಕಾರದ ಕೃಷಿ ಸಚಿವಾಲಯದಿಂದ ಅಧಿಕಾರಿಗಳ ಒಂದು ತಂಡವನ್ನು ಕಳುಹಿಸುವುದಾಗಿ ತಿಳಿಸಿದರು.

ಶ್ರೀ ಕುರುಬೂರು ಶಾಂತಕುಮಾರ್‌ರವರು ವಿಚಾರಸಂಕಿರಣದಲ್ಲಿ ಮಾತನಾಡಿ ಶ್ರೀಮಠವು ರೈತ ಉತ್ಪಾದಕರ ಕಂಪನಿಗಳಿಗೆ ಒತ್ತು ಕೊಟ್ಟಿರುವುದನ್ನು ಶ್ಲಾಘಿಸಿದರು. ಹಾಗೆಯೇ, ತಮ್ಮ ರೈತ ಮಿತ್ರ ರೈತ ಉತ್ಪಾದಕ ಕಂಪನಿಯ ಪ್ರಗತಿಯನ್ನು ವಿವರಿಸುತ್ತಾ ಒಂದು ಕಂಪನಿಯ ಮೂಲಕ ನಮಗೆ ಯಶಸ್ಸು ಸಾಧ್ಯವಾಗಿದೆ; ಸರ್ಕಾರಕ್ಕೆ ರೈತರ ಸಮಸ್ಯೆಗಳನ್ನು ಪರಿಹರಿಸಲು ರೈತ ಉತ್ಪಾದನಾ ಕಂಪನಿ ಒಂದು ಉತ್ತಮ ಅವಕಾಶವೆಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಸಚಿವ ಶ್ರೀ ಟಿ.ಬಿ. ಜಯಚಂದ್ರರವರು ಕೃಷಿ ವಿಚಾರಸಂಕಿರಣ ರೈತರ ಬಾಳಿಗೆ ಆಶಾಕಿರಣವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ವಿಚಾರಸಂಕಿರಣದ ಸಮ್ಮುಖವಹಿಸಿ ಮಾತನಾಡಿದ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಇಂದಿನ ದಿನಮಾನಸದಲ್ಲಿ ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದು, ಯುವಕರಿಗೆ ಕೃಷಿ ಮಹತ್ವವನ್ನು ತಿಳಿಸಿ ಆಕರ್ಷಿತರನ್ನಾಗಿಸಬೇಕೆಂದು ಕರೆನೀಡಿದರು.

ಜಾತ್ರಾಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಾಯೋಜಿತವಾಗಿರುವ ದೇಸಿ ಹಸುಗಳ ಸಂರಕ್ಷಣೆಯ ಅಂಗವಾಗಿ ಕೆವಿಕೆಯ ಅವರಣದಲ್ಲಿ ಗೋಶಾಲೆಯನ್ನು ಸಚಿವರಾದ ಶ್ರೀ ವಿನಯ್ ಆರ್. ಕುಲಕರ್ಣಿಯವರು ಉದ್ಘಾಟಿಸಿದರು ಹಾಗೂ ಐಸಿಎಆರ್‌ನ ಸೀಡ್ ಹಬ್ ಯೋಜನೆಯಡಿಯಲ್ಲಿ ಶ್ರೀ ಶಿವರಾತ್ರೀಶ್ವರ ಬಿತ್ತನೆ ಬೀಜದ ಗೋದಾಮು ಹಾಗೂ ಬೀಜ ಬ್ಯಾಂಕ್‌ನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಉದ್ಘಾಟಿಸಿದರು.

ಕೃಷಿ ವಿಚಾರಸಂಕಿರಣದ ಸಮಾರೋಪ ಸಮಾರಂಭದಲ್ಲಿ ನಬಾರ್ಡ್‌ನ ಮುಖ್ಯ ಮಹಾಪ್ರಬಂಧಕರಾದ ಡಾ. ಎಂ.ಐ ಗಣಗಿರವರು ಮಾತನಾಡಿ ಗ್ರಾಮೀಣ ಯುವಕರು ಇಂದಿನ ಆಧುನಿಕ ಯುಗದಲ್ಲಿ ಕೃಷಿಯನ್ನು ಸವಾಲಾಗಿ ಸ್ವೀಕರಿಸಬೇಕೆಂದು ಕರೆನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರೈತ ಸಂಘದ ಮುಖಂಡ ಹಾಗೂ ಶಾಸಕರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ರೈತರಿಗೆ ಸಿಗದ ಸಾಲ, ಇತರರಿಗೆ ಸಲೀಸು ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಬಸವರಾಜ ಹೊರಟ್ಟಿರವರು ರೈತರು ಉಪಕಸುಬುಗಳನ್ನು ತಮ್ಮ ಕೃಷಿಯೊಡನೆ ಜೋಡಿಸಿಕೊಂಡರೆ, ಬದುಕಿಗೆ ಊರುಗೋಲಾಗುತ್ತದೆಂದು ಅಭಿಪ್ರಾಯಪಟ್ಟರು. ಕೃಷಿ ವಿಚಾರಸಂಕಿರಣದ  ಸಮಾರೋಪ ಸಮಾರಂಭದ ಸಮ್ಮುಖವಹಿಸಿದ್ದ ಹಾರನಹಳ್ಳಿಯ ಶ್ರೀಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳವರು ಜಾತ್ರೆಯಲ್ಲಿ ವ್ಯವಸ್ಥೆ ಮಾಡಿರುವ ಎಲ್ಲಾ ಅನುಕೂಲಗಳನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ನುಡಿದರು ಮತ್ತು ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಗುರುಪೀಠದ

ಶ್ರೀ ಬಸವಪ್ರಭು ಮಾದಾರ ಚೆನ್ನಯ್ಯಸ್ವಾಮಿಗಳು ಶಾಲಾ ಪಠ್ಯದಲ್ಲಿ ಕೃಷಿ ವಿಷಯವಿರಲಿ ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ 'ಸಿರಿಧಾನ್ಯಗಳಿಂದ ಸಾಂಪ್ರದಾಯಿಕ ಖಾದ್ಯಗಳು' ಮತ್ತು 'ದ್ವಿದಳ ಧಾನ್ಯಗಳ ಅಪೂರ್ವ ಲೋಕ' ಎಂಬ ಪುಸ್ತಕಗಳು ಲೋಕಾರ್ಪಣೆಗೊಂಡವು. ಒಟ್ಟು ಆರು ದಿನಗಳವರೆಗೆ ನಡೆದ ಕೃಷಿಮೇಳವನ್ನು ಲಕ್ಷಾಂತರ ರೈತರು ಹಾಗೂ ಭಕ್ತರು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು. ಸಾವಿರಾರು ಶಾಲಾ ವಿದ್ಯಾರ್ಥಿಗಳು ಬೆಳೆ ಹಾಗೂ ಜೀವವೈವಿಧ್ಯವನ್ನು ಪ್ರತ್ಯಕ್ಷ ಕಂಡು ಅಪೂರ್ವ ಶೈಕ್ಷಣಿಕ ಅನುಭವ ಪಡೆದುಕೊಂಡರು, ಸೆಲ್ಫಿ ತೋಟ ಸಾವಿರಾರು ಸೆಲ್ಫಿಗಳಿಗೆ ಕಾರಣವಾದವು.

ಕೃಷಿಮೇಳವನ್ನು ಯಶಸ್ವಿಯಾಗಿ ಏರ್ಪಡಿಸಲು ಆಶೀರ್ವದಿಸಿದ ಪರಮಪೂಜ್ಯ ಜಗದ್ಗುರುಗಳವರಿಗೆ ಕೃಷಿ ವಿಜ್ಞಾನ ಕೇಂದ್ರದ ಸಮಸ್ತ ಸಿಬ್ಬಂದಿಯವರ ಪರವಾಗಿ ಭಕ್ತಿಪೂರ್ವಕ ಕೃತಜ್ಞತೆಗಳು. ಮಾರ್ಗದರ್ಶನ ನೀಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿವಾಹಕ ಕಾರ್ಯದರ್ಶಿಯವರು, ಕಾರ್ಯದರ್ಶಿಗಳವರು, ಗ್ರಾಮೀಣಾಭಿವೃದ್ಧಿ ವಿಭಾಗ ಹಾಗೂ ತೋಟಗಾರಿಕೆ ನಿರ್ದೇಶಕರಿಗೆ ಹೃದಯಪೂರ್ವಕ ಧನ್ಯವಾದಗಳು. ನಿರಂತರ ಬೆಂಬಲ ಹಾಗೂ ಪ್ರೋತ್ಸಾಹ ನೀಡಿದ ಜಾತ್ರಾಮಹೋತ್ಸವ ಸಮಿತಿಯ ಕಾರ್ಯದರ್ಶಿಗಳು, ಸಮಿತಿಯ ಸದಸ್ಯರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಹಿರಿಯ ಅಧಿಕಾರಿಗಳು ಹಾಗೂ ಸ್ವಯಂ ಸೇವಕರುಗಳಿಗೆ ಅನಂತ ಧನ್ಯವಾದಗಳು. ಮೈಸೂರು ಜೆಎಸ್‌ಎಸ್ ವಿಜ್ಞಾನ ಕಾಲೇಜಿನ 40 ವಿದ್ಯಾರ್ಥಿಗಳು ರೈತರಿಗೆ ಮಾರ್ಗದರ್ಶನ ನೀಡಲು ಸಹಕರಿಸಿದರು. ಸ್ವಯಂಸೇವಕರುಗಳಿಗೂ ಹಾಗೂ ಅವರ ಅಧ್ಯಾಪಕವೃಂದವರೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಕೃಷಿಮೇಳದ ಪ್ರಾಯೋಜಕರಾದ ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು, ರಾಷ್ಟ್ರೀಯ ತೋಟಗಾರಿಕೆ ಮಿಷನ್, ಬೆಂಗಳೂರು, ಐಸಿಎಆರ್–ಅಟಾರಿ, ಬೆಂಗಳೂರು ಇವರಿಗೆ ಹೃತ್ಪೂರ್ವಕ ಧನ್ಯವಾದಗಳು. ಕೃಷಿಮೇಳಕ್ಕೆ ಉತ್ತಮ ಪ್ರಚಾರ ಒದಗಿಸಿದ ಮಾಧ್ಯಮ ಪ್ರತಿನಿಧಿಗಳಿಗೆ ವಿಶೇಷ ಧನ್ಯವಾದಗಳು.